09.08.2018

ಸಾಕ್ಷಿ ಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ  ಜಿ ಜಿ ವಕೀಲರಿಂದಃ

ನೀವು ತೆಲಗಿನಕುಪ್ಪೆ ಗ್ರಾಮ ಕ್ಕೆ ಬಂದು ಎಷ್ಟು ವರ್ಷ ಆಗಿರುತ್ತದೆ ಎಂದರೆ ಸಾಕ್ಷಿಯು ನನ್ನ ತಂದೆ ತೆಲಗಿನಕುಪ್ಪೆಗೆ ಬಂದು ಈಗ ಸುಮಾರು 50-60 ವರ್ಷಗಳಾಗಿರುತ್ತದೆ ಎಂದು ನುಡಿಯುತ್ತಾರೆ. ನಾನು ಕೂಡ ನನ್ನ ತಂದೆಯೊಡನೆ ಸದರಿ ಗ್ರಾಮಕ್ಕೆ ಬಂದಿರುತ್ತೇನೆ. ನನ್ನ ತಾತ ಕಾಡುನಾಯಕ ರವರನ್ನು ನಾನು ನೋಡಿರುವುದಿಲ್ಲ. ನಾನು ಅವರನ್ನು ನೋಡದೇ ಇರುವ ಕಾರಣ ಅವರಿಗೆ ಎಷ್ಟು ಜನ ಮಕ್ಕಳಿದ್ದಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ ಎಂದರೆ ಸರಿಯಲ್ಲ. ವಂಶವೃಕ್ಷದ ಆಧಾರದ ಮೇರೆಗೆ ನನ್ನ ತಾತನಿಗೆ ಎಷ್ಟು ಜನ ಮಕ್ಕಳಿದ್ದರು ಎಂದು ಹೇಳಬಲ್ಲೆ. ನನ್ನ ತಂದೆ ತೆಲಗಿನಕುಪ್ಪೆ ಗ್ರಾಮಕ್ಕೆ ಬರುವಾಗ ಅವರ ಪ್ರಾಯ ಸುಮಾರು 25-30 ವರ್ಷ ಆಗಿದ್ದಿರಬಹುದು. ಆಗ ನನಗೆ ಸುಮಾರು 14 ವರ್ಷ ಇದ್ದಿರಬಹುದು. ನನ್ನ ತಂದೆಗೆ ನಾನು ಏಕೈಕ ಪುತ್ರ ಇದ್ದು ಇತರ ಆರು ಹೆಣ್ಣು ಮಕ್ಕಳು ಜನಿಸಿರುತ್ತಾರೆ. ಈ ದಾವೆಯಲ್ಲಿ ನನ್ನ ಸಹೋದರಿಯರನ್ನು ಪಕ್ಷಕಾರರಾಗಿ ಮಾಡಿಲ್ಲ. ಆ ರೀತಿ ಮಾಡಲು ನನಗೆ ಯಾವುದೇ ತೊಂದರೆ ಇಲ್ಲ. ನಾನು ಉದ್ದೇಶಪೂರ್ವಕವಾಗಿ ನನ್ನ ಸಹೋದರಿಯರನ್ನು ಈ ದಾವೆಗೆ ಪಕ್ಷಕಾರರಾಗಿ ಮಾಡಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ಕಾಡುನಾಯಕ ರವರ ಮಗ ಎಂದು ಹೇಳಲು ನನ್ನ ತಂದೆಯೇ ಅವರ ಜೀವಿತ ಕಾಲದಲ್ಲಿ ವಂಶವೃಕ್ಷ ತಂದು ಅವರ ಬಳಿಯೇ ಇಟ್ಟುಕೊಂಡಿದ್ದರು, ಸದರಿ ವಂಶವೃಕ್ಷದ ಆದಾರದ ಮೇರೆಗೆ ನನ್ನ ತಂದೆ ಕಾಡುನಾಯಕ ರವರ ಮಗ ಎಂದು ಹೇಳುತ್ತಿದ್ದೇನೆ.

ಸದರಿ ವಂಶವೃಕ್ಷವನ್ನು ನನ್ನ ತಂದೆ ಪಂಚಾಯ್ತಿ ಕಚೇರಿಯಿಂದ ಬರೆಸಿಕೊಂಡಿರುತ್ತಾರೆ. ಸದರಿ ವಂಶವೃಕ್ಷವನ್ನು ನ್ಯಾಯಾಲಯ ಕ್ಕೆ ಹಾಜರುಪಡಿಸಲು ನನಗೆ ತೊಂದರೆ ಇಲ್ಲ. ಕಾಡುನಾಯಕ ರವರಿಗೆ ಕೇವಲ ಮಲ್ಲಪ್ಪ ನಾಯ್ಕ ಎಂಬುವರು ಏಕೈಕ ಪುತ್ರ ಇರುತ್ತಾರೆ ಎಂದರೆ ಸಾಕ್ಷಿಯು ಮಲ್ಲಪ್ಪ ನಾಯಕ ಮತ್ತು ಸಣ್ಣಪ್ಪ ನಾಯ್ಕ ಎಂಬ ಇಬ್ಬರು ಮಕ್ಕಳಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಮಲ್ಲಪ್ಪ ನಾಯಕ ರವರ ಪತ್ನಿ ಹೆಸರು ಸಣ್ಣಮ್ಮ ಇರುತ್ತದೆ. ಸಣ್ಣಮ್ಮ ರವರು ಮಲ್ಲಪ್ಪ ನಾಯಕ ರವರ ಪತ್ನಿ ಎಂದು ನಾನು ವಕೀಲರ ಬಳಿ ಹೇಳಿರುತ್ತೇನೆ. ಸದರಿ ಸಣ್ಣಪ್ಪನಾಯಕ. ಕೆ ಎಂಬುವರು ಕಾಡುನಾಯಕ ರವರ ಮಗನಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳು ನನ್ನನ್ನಾಗಲೀ ಅಥವಾ ಕೆ ಸಣ್ಣಪ್ಪ ನಾಯಕ ರವರನ್ನಾಗಲೀ ಈವರೆಗೂ ನೋಡಿರುವುದಿಲ್ಲ ಆದರೆ ಈ ದಾವೆ ಹೂಡಿದ ನಂತರ ಅವರು ನಮ್ಮನ್ನು ನೋಡಿರುತ್ತಾರೆ ಎಂದರೆ ಸರಿಯಲ್ಲ. ಮಲ್ಲಪ್ಪ ನಾಯಕ ಮತ್ತು ಸಣ್ಣಪ್ಪ ನಾಯಕ, ಮೊದಲಿಗೆ ನಿಲವಾಡಿ ಗ್ರಾಮದಲ್ಲಿ ವಾಸವಿದ್ದರು. ಅವರುಗಳು ನಿಲವಾಡಿ ಗ್ರಾಮದಲ್ಲಿ ವಾಸವಿದ್ದರು ಎಂದು ತೋರಿಸಲು ನಾನು ನ್ಯಾಯಾಲಯ ಕ್ಕೆ ದಾಖಲೆ ಹಾಜರುಪಡಿಸಿದ್ದೇನೆ. ಮಲ್ಲಪ್ಪ ನಾಯಕ ರವರಿಗೆ ನಿಂಗಪ್ಪ ನಾಯಕ ಮತ್ತು 1 ನೇ ಪ್ರತಿವಾದಿ ಮಾತ್ರ ಮಕ್ಕಳಿರುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನಿಂಗಪ್ಪ ನಾಯಕ ಮೃತಪಟ್ಟಿದ್ದಾರೆ ಎಂದು ನುಡಿಯುತ್ತಾರೆ. ಮಲ್ಲಪ್ಪ ರವರ ಮಗ ದತ್ತನಿ ಅಲ್ಲ ಎಂದರೆ ಸರಿಯಲ್ಲ. ಆತನ ಹೆಸರು ದತ್ತಾತ್ರೇಯ ಎಂದರೆ ಸರಿಯಲ್ಲ. ಅದೇ ರೀತಿ ಮಲ್ಲಪ್ಪ ರವರ ವಂಶವೃಕ್ಷದಲ್ಲಿ ಕಾಣಿಸಿರುವ ಹೆಸರು ಪಾಪು ಇರುವುದಿಲ್ಲ ವೀಣಾ ಇರುತ್ತದೆ ಎಂದರೆ ಸರಿಯಲ್ಲ. ಅವರ ಕುಟುಂಬದ ಸದಸ್ಯರ ಬಗ್ಗೆ ನನಗೆ ಗೊತ್ತಿಲ್ಲದ ಕಾರಣ ಸುಳ್ಳು ಹೆಸರುಗಳನ್ನು ನಮೂದಿಸಿರುತ್ತೇನೆ ಎಂದರೆ ಸರಿಯಲ್ಲ.

ನಾವು ನಿಲವಾಡಿ ಗ್ರಾಮದಿಂದ ಬಂದು ತೆಲಗಿನಕುಪ್ಪೆ ಗ್ರಾಮದಲ್ಲಿ ನೆಲೆಸಿರುತ್ತೇವೆ ಎಂಬುದನ್ನು ನೋಡಿದವರು ಇರುತ್ತಾರೆ. ಅವರು ಮಲ್ಲಪ್ಪ ಮತ್ತು ನಾಗಣ್ಣ ಇರುತ್ತಾರೆ. ಹಾಗೂ ಅವರು ಈಗ ಜೀವಂತ ಇರುತ್ತಾರೆ. ನಾವು ಮಲ್ಲಪ್ಪ ಎಂಬುವವರ ಮನೆಯಲ್ಲಿ ವಾಸಮಾಡುತ್ತಿದ್ದೆವು. 1 ನೇ ಪ್ರತಿವಾದಿ ಮನೆಯಲ್ಲಿ ಅವರೊಡನೆ ವಾಸವಿದ್ದರು ಮನಸ್ತಾಪ ಆದ ಕಾರಣ ನನ್ನ ತಂದೆ ಹೊರ ಬಂದಿರುತ್ತಾರೆ. ನಿಲವಾಡಿ ಗ್ರಾಮದಲ್ಲಿ ನ ಮಗೆ ಸೇರಿದ ಸ್ವಂತ ಮನೆ ಯಾವುದೂ ಇದ್ದಿರುವುದಿಲ್ಲ. ನನ್ನ ತಂದೆ ನಿಲವಾಡಿ ಗ್ರಾಮದಲ್ಲಿ ಸ್ವಂತ ಮನೆಯಲ್ಲಿದ್ದಿರುತ್ತಾರೆ ಎಂದು ನಮ್ಮ ವಕೀಲರಿಗೆ

ಹೇಳಿರುವುದಿಲ್ಲ ಆದರೆ ನಾವು ಒಟ್ಟು ಕುಟುಂಬದಲ್ಲಿದ್ದಿರುತ್ತೇವೆ ಎಂದು ನುಡಿಯುತ್ತಾರೆ. ಸದರಿ ಸಂದರ್ಭಗಳಲ್ಲಿ ನನ್ನ ತಂದೆ ಹೆಸರು ರೆವಿನ್ಯೂ ದಾಖಲೆ ಅಥವಾ ಪಂಚಾಯಿತಿ ದಾಖಲೆ ಅಥವಾ ಚುನಾವಣಾ ಗುರುತಿನ ಚೀಟಿಯಲ್ಲಾಗಲೀ ನಮೂದಾಗಿಲ್ಲ. ನನ್ನ ತಂದೆ ನಿಲವಾಡಿ ಗ್ರಾಮದಲ್ಲಿ ವಾಸವಿರುವಾಗ ತನ್ನ ಮತವನ್ನು ಚಲಾಯಿಸುತ್ತಿದ್ದರು.

ನಿಲವಾಡಿ ಗ್ರಾಮದಲ್ಲಿ ನನ್ನ ತಾತನಿಗೆ ಸೇರಿದ ಜಮೀನಿದ್ದು ಅದರ ಸರ್ವೆ ಸಂಖ್ಯೆ 45/1 ಇದ್ದು ಅದರ ವಿಸ್ತೀರ್ಣ 9-01 ಎಕ್ರೆ ಇದ್ದಿರುತ್ತದೆ. ಅದೇ ರೀತಿ ಅದೇ ಗ್ರಾಮದಲ್ಲಿ ಸರ್ವೆ ಸಂಖ್ಯೆ 64/1 ಮತ್ತು 64/2 ರಲ್ಲಿ ವಿಸ್ತೀರ್ಣ ಒಟ್ಟು 6-35 ಗುಂಟೆ ಇರುತ್ತದೆ. ಮೇಲೆ ಹೇಳಿದ ಜಮೀನಿನ ಪೋಡುಗಳು ಪ್ರತ್ಯೇಕವಾಗಿ ಚಕ್ಕುಬಂದಿ ಇರುತ್ತವೆ. ಈ ದಾವೆಯಲ್ಲಿ ಪ್ರತ್ಯೇಕ ಚಕ್ಕುಬಂದಿ ವಿವರಿಸಿರುವುದಿಲ್ಲ. ಸರ್ವೆ ಸಂಖ್ಯೆ 64/1 ರ ಪೂಃ ಓಣಿ , ಪಃ ಕೆರೆ, ಉಃ ಸರ್ಕಾರಿ ರಸ್ತೆ ದಃ ಅಂದಾನಮ್ಮ ರವರ ಜಮೀನಿರುತ್ತದೆ. ಸಾಕ್ಷಿ ಮುಂದುವರೆದು ಈಗ ಹೇಳಿದ ಚಕ್ಕುಬಂದಿಯು ಸರ್ವೆ ಸಂಖ್ಯೆ 45/1 ಕ್ಕೆ ಇದ್ದಿರುತ್ತದೆ. ಸರ್ವೆ ಸಂಖ್ಯೆ 64/1 ಮತ್ತು 64/2 ರ ಪೂಃ ಓಣಿ, ಪಃ ಚಿಕೆರೆ, ಉಃ ಸರ್ಕಾರಿ ರಸ್ತೆ ದಃ ಸೇರಿದ ಹಾಗೆ ಕೆರೆ ಇರುತ್ತದೆ. ಅದೇ ರೀತಿ ನನ್ನ ತಾತನ ಹೆಸರಿನಲ್ಲಿ ಸರ್ವೆ ಸಂಖ್ಯೆ 52/1 ಮತ್ತು 52/3 ಇರುತ್ತದೆ. ಅದು ಒಟ್ಟು 2-12 ಗುಂಟೆ ಇರುತ್ತದೆ. ಪೂಃ ರಾಮೇಗೌಡನ ಜಮೀನು ಪಃ ಅಂದಾನಮ್ಮ ರವರ ಜಮೀನು ಉಃ ಸರ್ಕಾರಿ ರಸ್ತೆ, ದಃ ಚಿಕೆರೆ ಇರುತ್ತದೆ. ದಾವ ಸ್ವತ್ತಿನಲ್ಲಿ ವಿವರಿಸಿರುವ ಮನೆ ಜಂಜರ್ ಸಂಃ ನಿಮಗೆ ಗೊತ್ತಾ ಎಂದರೆ ಸಾಕ್ಷಿಯು ನನಗೆ ಸರಿಯಾಗಿ ಗೊತ್ತಿಲ್ಲ ಅದು ಸಂಃ 35 ಇರಬಹುದು ಎಂದು ನುಡಿಯುತ್ತಾರೆ. ಅದೇ ರೀತಿ ಆಸ್ತಿ ಸಂಃ 335 ಇರಬಹುದು ಎಂದು ನುಡಿಯುತ್ತಾರೆ. ಅದು ಪೂಪಃ 60 ಅಡಿ ಉದಃ 100 ಅಡಿ ಇರುತ್ತದೆ. ನಿರ್ದಿಷ್ಟವಾಗಿ ಇಷ್ಟೇ ಅಡಿ ಇದೆ ಎಂದು ತೋರಿಸಲು ಪಂಚಾಯಿತಿ ದಾಖಲೆ ಇರುತ್ತದೆ. ನಿಪಿ 10 ರಲ್ಲಿ ಅಳತೆ ವಿವರಣೆ ಆಗಿದೆ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾ ಅಂದಾಜಿನ ಮೇರೆಗೆ 60 ಇಂಟು 100 ಅಡಿ ಇರುತ್ತದೆ ಎಂದು ನುಡಿಯುತ್ತಾರೆ. ಈ ಸ್ವತ್ತಿನ ಪೂಃ ಆನಂದ್ ರವರ ಮನೆ ಇರುತ್ತದೆ ಎಂದರೆ ಸಾಕ್ಷಿಯು ಹೌದು ಎಂದು ಒಪ್ಪುತ್ತಾರೆ. ಪಃ ಸಣ್ಣನಾಯ್ಕ ರವರ ಮನೆ ಎಂದರೆ ಸಾಕ್ಷಿಯು ಕರಿನಾಯ್ಕ ರವರ ಮನೆ ಇರುತ್ತದೆ ಎಂದು ನುಡಿಯುತ್ತಾರೆ. ದ ಮತ್ತು ಉಃ ಸರ್ಕಾರಿ ರಸ್ತೆ ಇರುತ್ತದೆ. ದಕ್ಷಿಣ ದಿಕ್ಕಿನಲ್ಲಿ ಕೃಷ್ಣಪ್ಪ ಮತುತ ನಿಂಗಪ್ಪ ರವರ ಮನೆ ಇರುತ್ತದೆ ಎಂದರೆ ಸಾಕ್ಷಿಯು ಸರ್ಕಾರಿ ರಸ್ತೆ ಇರುತ್ತದೆ ಎಂದು ನುಡಿಯುತ್ತಾರೆ. ಈ ಚಕ್ಕುಬಂದಿಗಳನ್ನು ನಾನೇ ಖುದ್ದಾಗಿ ಬೇಟಿ ನೀಡಿ ತಿಳಿದುಕೊಂಡು ವಿವರಣೆ ನೀಡುತ್ತಿದ್ದೇನೆ.

ನನ್ನ ತಾತನಿಗೆ ಕೇವಲ ಒಂದೇ ಮನೆ ಇದ್ದಿರುತ್ತದೆ. ಈ ಮನೆಯು 5 ನೇ ಪ್ರತಿವಾದಿ ಧನರಾಜ್ ರವರಿಗೆ ಈಗ ಸೇರಿರುತ್ತದೆ ಎಂದರೆ ಸರಿ. ಈ ಮನೆಯ ಉತ್ತರ ದಿಕ್ಕ್ಗೆ ಸ್ವಲ್ಪ ಖಾಲೀ ಜಾಗ ಇರುತ್ತದೆ ಎಂದರೆ ಸರಿ. ಸದರಿ ಖಾಲಿ ಜಾಗವನ್ನು 1 ನೇ ಪ್ರತಿವಾದಿಯು ರಾಜ ನಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ರಾಜ ಎಂಬುವರಿಗೆ ಮಾರಾಟ ಮಾಡಿರುವ ಜಾಗವು ದಾವ ಸ್ವತ್ತು 4 ರಲ್ಲಿ ಸೇರಿರುವ ಸ್ವತ್ತು ಎಂದರೆ ಸರಿ. ನನ್ನ ತಂದೆ ಮತ್ತು ನಾನು ಮಳಿಗೆ ಅಂಗಡಿ ಇಟ್ಟುಕೊಂಡು ವ್ಯಾಪಾರ ಮಾಡುತ್ತಿದ್ದೇವೆ ಎಂದು ತೋರಿಸಲು ಸಂಬಂದಪಟ್ಟವರಿಂದ ಪರವಾನಿಗೆ ಪಡೆದಿರುತ್ತೇವೆ. ಅದನ್ನು ನಾನು ನ್ಯಾಯಾಲಯ ಕ್ಕೆ ಹಾಜರುಪಡಿಸಿಲ್ಲ. ಆ ರೀತಿ ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇಲ್ಲ. ತೆಲಗಿನಕುಪ್ಪೆ ಗ್ರಾಮದಲ್ಲಿ ನಾನು 4 ಎಕ್ರೆ ಜಮೀನನ್ನು ನಾನು ಖರೀದಿಸಿರುತ್ತೇನೆ. ಸದರಿ ಕ್ರ ಯಪತ್ರ ವನ್ನ ನ್ಯಾಯಾಲಯ ಕ್ಕೆ ಹಾಜರುಪಡಿಸಿಲ್ಲ. ಸದರಿ ಜಮೀನನ್ನು ಈ ದಾವೆಗೆ ಸೇರಿಸಿರುವುದಿಲ್ಲ. ಆ ರೀತಿ ಸೇರಿಸಲು ನನಗೆ ತೊಂದರೆ ಇಲ್ಲ.

ದಾವ ಸ್ವತ್ತುಗಳಲ್ಲಿ ಭಾಗ ಕೊಡಬೇಕೆಂದು ಈವರೆಗೂ ಕೇಳಿರುವುದಿಲ್ಲ. ಸಾಕ್ಷಿ ಮುಂದುವರೆದು 1 ನೇ ಪ್ರತಿವಾದಿ ನನ್ನ ತಂದೆಗೆ ಸರ್ವೆ ಸಂಖ್ಯೆ 45/1 ರಲ್ಲಿ 2 ಎಕ್ರೆ ಜಮೀನು ಬಿಟ್ಟುಕೊಟ್ಟಿರುತ್ತಾರೆ, ಗಲಾಟೆ ಆದ ಕಾರಣ ನನ್ನ ತಂದೆ ಊರಿಗೆ ಬಂದಿರುತ್ತಾರೆ ಎಂದು ನುಡಿಯುತ್ತಾರೆ. ಈ ವಿಚಾರವನ್ನು ನಮ್ಮ ವಕೀಲರಿಗೆ ಹೇಳಿರುತ್ತೇನೆ. ಸದರಿ ಜಮೀನಿಗೆ ಸಂಬಂಧಿಸಿದಂತೆ ನನ್ನ ತಂದೆ ಖಾತೆ ಮಾಡಿಸಿಕೊಂಡಿರುವುದಿಲ್ಲ. ನನ್ನ ತಂದೆ ಪ್ರತಿವಾದಿಗೆ ಯಾವುದೇ ಸಂಬಂದ ಇಲ್ಲದಿದ್ದ ಕಾರಣ ಆ ರೀತಿ 2 ಎಕ್ರೆ ಜಮೀನು ಬಿಟ್ಟುಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ತೆಲಗಿನಕುಪ್ಪೆ ಗ್ರಾಮದಲ್ಲಿ ನನ್ನ ತಂದೆ ನಾಡ ಹಂಚಿನ ಮನೆ ನಿರ್ಮಿಸಿರುತ್ತಾರೆ. ಸದರಿ ಮನೆಯನ್ನು ಈ ದಾವೆಗೆ ಸೇರಿಸಿರುವುದಿಲ್ಲ. ನಾನು ಸಣ್ಣಪ್ಪ ನಾಯಕ

ರವರ ಮಗನಲ್ಲದಿದ್ದರೂ ಕೂಡ ಆತನ ಮಗ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಕಾಡುನಾಯಕ ರವರಿಗೆ ಕೆ ಸಣ್ಣಪ್ಪ ನಾಯಕ ಮಗನೇ ಇರಲಿಲ್ಲ ಎಂದರೆ ಸರಿಯಲ್ಲ. ದಾವ ಸ್ವತ್ತುಗಳನ್ನು ಲಪಟಾಯಿಸುವ ಉದ್ದೇಶದಿಂದ ನಾನು ಪ್ರತಿವಾದಿಗಳೊಡನೆ ಸುಳ್ಳು ಸಂಬಂಧ ಕಲ್ಪಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ತಂದೆ ಕಾಡುನಾಯಕ ರವರ ಎಂದು ತೋರಿಸಲು ವಂಶವೃಕ್ಷ ಹೊರತುಪಡಿಸಿ ಬೇರೆ ದಾಖಲೆ ಹಾಜರುಪಡಿಸಿಲ್ಲ.

ನಾನು ವಿವರಿಸಿರುವ ಚಕ್ಕುಬಂದಿಗಳೊಳಗೆ ನಾನು ಹೇಳಿದ ಸ್ವತ್ತುಗಳು ಅಸ್ತಿತ್ವದಲ್ಲಿರುವುದಿಲ್ಲ ಎಂದರೆ ಸರಿಯಲ್ಲ. ನಾನು ದಾವ ಸ್ವತ್ತುಗಳನ್ನು ನೋಡದ ಕಾರಣ ಅದರ ನಿಜ ಸ್ವರೂಪ ನನಗೆ ಗೊತ್ತಿರುವುದಿಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಭಾಗಕ್ಕೆ ಬಂದ ಮನೆ ಕುಸಿದು ಬಿದ್ದು ಹೋಗಿರುತ್ತದೆ ಎಂದರೆ ಸರಿ. ನಿಂಗಪ್ಪ ನಾಯಕ ಮತ್ತು ಮಲ್ಲಪ್ಪ ನಾಯಕ ರವರ ನಡುವೆ ವಿಭಾಗ ಆಗಿರುತ್ತದೆ ಎಂದರೆ ಸಾಕ್ಷಿಯು ಈಗ ಸುಮಾರು ಹತ್ತು ವರ್ಷ ಆಗಿರುತ್ತದೆ ಎಂದು ನುಡಿಯುತ್ತಾರೆ. ಆ ಪ್ರಕಾರ ಅವರು ಖಾತೆ ಕೂಡ ವರ್ಗಾಯಿಸಿಕೊಂಡಿರುತ್ತಾರೆ ಎಂದರೆ ಸರಿ. ಪಹಣಿ ಪತ್ರಿಕೆಯನ್ನು ನಾನು ಪ್ರಶ್ನಿಸಿರುವುದಿಲ್ಲ ಆದರೆ ಸಂಬಂದಪಟ್ಟ ಇಲಾಖೆಯಲ್ಲಿ ನಾವು ಕೇಳಿರುತ್ತೇವೆ. ನಾನು ಸುಳ್ಳು ದಾವೆ ಹೂಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನಾಗಲೀ ಅಥವಾ ನನ್ನ ತಂದೆಯಾಗಲೀ ನಿಲವಾಡಿ ಗ್ರಾಮದಲ್ಲಿ ಎಂದಿಗೂ ವಾಸವಾಗಿಯೇ ಇರಲಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

ತೆ ನ್ಯಾ ನ ಉ ಬೆ ಮಾ

ಓ ಹೇ ಕೇ ಸ ಇ ಒ

ಸಿ.ನ್ಯಾ ಹಾಗೂ ಪ್ರ.ವ.ನ್ಯಾದಂ.
ಪಿರಿಯಾಪಟ್ಟಣ